# *4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು*

ಎಸ್‌ಸಿ. 160/2023

| | | | |
|---|---|---|---|
| ಸಾಕ್ಷಿದಾರರ ಹೆಸರು | ಃ ಶ್ರೀ ಕಶ್ಯಪ್ | | ಪ್ರಮಾಣ ಮಾಡಿಸಿದ ದಿನಾಂಕಃ |
| ತಂದೆ/ಗಂಡನ ಹೆಸರು | ಃ ಶ್ರೀ ಮಂಜುನಾಥ್ | | **16.07.2024** |
| ವಯಸ್ಸು | ಃ 34 ವರ್ಷ | | |
| ವೃತ್ತಿ | ಃ ಮ್ಯಾನೇಜರ್, ಅದ್ವೈತ ರೆಸಿಡೆನ್ಸಿ | ಪ್ರಾ.ಸಾ. | ಃ 08 |
| ವಾಸಸ್ಥಳ | ಃ ಮೈಸೂರು | ಚಾ.ಸಾ. | ಃ 14 |

**ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ**

. ನಾನು ಕಳೆದ *5* ವರ್ಷಗಳಿಂದ ಅದ್ವೈತ ರೆಸಿಡೆನ್ಸಿಯಲ್ಲಿ ಮ್ಯಾನೇಜರ್ ಆಗಿ ಕೆಲಸ ಮಾಡುತ್ತಿದ್ದೇನೆ. *2022* ನೇ ಇಸವಿಯಲ್ಲಿ ಒಂದು ಪ್ರಜ್ವಲ್ ಎನ್ನುವ ನಮ್ಮ ಹೋಟೆಲ್ ನ ಸಿಬ್ಬಂದಿ ಹೋಟೆಲ್ ಮೇಲಿಂದ ಬಿದ್ದು ಮರಣಹೊಂದಿದ್ದರಿಂದ ಆ ಕುರಿತಾದ ಸಿ.ಸಿ. ಟಿ.ವಿ ದೃಶ್ಯಾವಳಿಗಳ ಡಿ.ವಿ.ಆರ್ ಅನ್ನು ಪೋಲೀಸರು ವಶಕ್ಕೆ ಪಡೆದಿದ್ದರು ಆ ಕಾಲಕ್ಕೆ ನಾನು ಹಾಜರಿದ್ದೆ. ಆ ಸಿ.ಸಿ. ಟಿ.ವಿ ಯನ್ನು ನಾನು ನಿರ್ವಹಣೆ ಮಾಡುತ್ತಿದ್ದೆ. ನಮ್ಮ ಹೋಟೆಲ್ ನಲ್ಲಿ ಒಟ್ಟು *11* ಸಿ.ಸಿ. ಟಿ.ವಿ ಕ್ಯಾಮಾರ ಇದ್ದು ಆ ಪೈಕಿ ಎರಡು ಸಿ.ಸಿ. ಟಿ.ವಿ ಕ್ಯಾಮಾರದ ದೃಶ್ಯಗಳನ್ನು ಪೋಲೀಸರು ವಶಕ್ಕೆ ಪಡೆದಿದ್ದರು. ಆ ಕಾಲಕ್ಕೆ ಯಾವ ಯಾವ ಸಮಯದಿಂದ ಯಾವ ಸಮಯದ ದೃಶ್ಯಾವಳಿಗಳನ್ನು ವಶಕ್ಕೆ ಪಡೆದಿದ್ದರು ಎಂದು ಈಗ ನೆನಪಿಲ್ಲ. ಆ ದಿನ ವಶಕ್ಕೆ ಪಡೆದ ದೃಶ್ಯಗಳನ್ನು ನೋಡಿದರೆ ಗುರುತಿಸುತ್ತೇನೆ. ಆ ದಿನ ಆ ದೃಶ್ಯಗಳನ್ನು ಪೆನ್ ಡ್ರೈವ್ ನಲ್ಲಿ ಸಂಗ್ರಹಿಸಿ ವಶಕ್ಕೆ ಪಡೆದಿದ್ದರು. ಆ ದಿನ ಈಗ ನಾನು ನೋಡುತ್ತಿರುವ ಮಹಜರ್ ಗೆ ಸಹಿ ಪಡೆದಿದ್ದರು ಆದರೆ ಯಾವ ಕಾರಣಕ್ಕೆ ಪಡೆದಿದ್ದರು ಎಂದು ಗೊತ್ತಿಲ್ಲ. ಈಗ ನಾನು

ನೋಡುತ್ತಿರುವ ಮಹಜರ್ ಮೇಲಿನ ಸಹಿ ನನ್ನದೇ ಇದೆ. ಸದರಿ ಮಹಜರ್ ಅನ್ನು ನಿ.ಪಿ-*14* ಮತ್ತು ಸಹಿಯನ್ನು ನಿ.ಪಿ-*14(ಎ)* ಎಂದು ಗುರುತಿಸಿದೆ. ಆ ದಿನ ಈಗ ನಾನು ನೋಡುತ್ತಿರುವ ಪ್ರಮಾಣಪತ್ರವನ್ನು ಸಹ ನನ್ನಿಂದ ಪಡೆದಿದ್ದರು. ಸದರಿ ಪ್ರಮಾಣಪತ್ರದಲ್ಲಿನ ಸಹಿ ನನ್ನದೇ ಇದೆ. ಸದರಿ ಪ್ರಮಾಣಪತ್ರವನ್ನು ನಿ.ಪಿ-*15* ಮತ್ತು ಸಹಿಯನ್ನು ನಿ.ಪಿ-*15(ಎ)* ಎಂದು ಗುರುತಿಸಿದೆ. ಆ ಡಿ.ವಿ.ಆರ್ ಅನ್ನು ವಶಕ್ಕೆ ಪಡೆದಾಗ ಅದು ಸರಿಯಾಗಿ ಕೆಲಸ ಮಾಡುತ್ತಿತ್ತು ಆದರೆ ಸಮಯದಲ್ಲಿ *1 ½* ಗಂಟೆ ವ್ಯತ್ಯಾಸ ಇತ್ತು. ಈಗ ನಾನು ನೋಡುತ್ತಿರುವ ಪೆನ್ ಡ್ರೈವ್ ಆ ದಿನ ಸಿ.ಸಿ. ಟಿ.ವಿ ದೃಶ್ಯಗಳನ್ನು ಕಾಪಿ ಮಾಡಿಕೊಂಡಿದ್ದ ಪೆನ್ ಡ್ರೈವ್ ಇದೆ. ಸದರಿ ಪೆನ್ ಡ್ರೈವ್ ಅನ್ನು ನಿ.ಪಿ-*16* ಎಂದು ಗುರುತಿಸಿದೆ.

**ಈ ವೇಳೆಗೆ ಮುಂದುವರೆದ ಮುಖ್ಯ ವಿಚಾರಣೆಗೆ ಸಮಯ ಕೋರಿದ್ದರಿಂದ ಮುಂದೂಡಲಾಯಿತು.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

*ಓ ಹೇ ಕೇ ಸ ಇ ಎ ಒ.,*

*4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,*
ಮೈಸೂರು